ಕರ್ನಾಟಕ ವಿಧಾನಸಭೆ

KARNATAKA LEGISLATIVE ASSEMBLY

Wednesday 15th June 1977/Jyieshta 25, 1899 S. E.

The House met in the Assembly Chamber, Vidhana Soudha, at one of the Clock.

MADAM SPEAKER (SMT. K. S. NAGARATNAMMA) in the Chair.

STARRED QUESTIONS

(to which oral answers were given).

Repair of Kotegehara Kalasa Road in Mudigeri Taluk

10. SRI G. PUTTASWAMY (Mudigere)—Will the Minister for Public Works be pleased to state.—

(*a*) whether the Maravanige to Samse Road (P.W D.) in Kottigehara-Kalasa Road of Mudigere Taluk has been repaired as it is unrepaired since long;

(*b*) if not, whether the Government intends to prepare an estimate and provide facilities for trai sport to the passengers?

SRI M. MALLIKARJUNA SWAMY (Minister for Public Works).—

(*a*) No.

(*b*) This will be considered subject to the availability of funds.

ಶ್ರೀ ಜಿ. ಪುಟ್ಟಸ್ವಾಮಿ —ಸ್ವಾಮಿ ತಾವು ನನ್ನ ಪ್ರಶ್ನೆಗೆ ಉತ್ತರವಾಗಿ ಹೀಗಾಸು ಪರಿಸ್ಥಿತಿಯನ್ನು ಅವಲಂಬಿಸಿ ಇದನ್ನು ಪರಿಶೀಲಿಸಲಾಗುವುದು ಎಂದು ಹೇಳಿದ್ದೀರಿ ಈ ಕೊಟ್ಟಿಗೆಹಾರ—ಕಳಸ ರಸ್ತೆಯಲ್ಲಿ ಮೆರವಣಿಗೆಯಿಂದ ಸುತ್ತಿಗೆ ಹೋಗುವ ರಸ್ತೆ ಏನಿದೆ ಇದು ಕಂದುರೆವಂಖದ ಐರನ್ ಪ್ರಾಜೆಕ್ಟಿಗೆ ಹೋಗುವ ಉಪರಸ್ತೆಯಾಗಿದೆ. ಆದ್ದರಿಂದ ಇದನ್ನು ಸರ್ಕಾರದವರು ಪರಿಶೀಲಿಸಿ ಏನು ಐರನ್ ಪ್ರಾಜೆಕ್ಟಿಗೆ ಹೋಗುವ ರಸ್ತೆಯಾಗಿದ್ದ ಪಕ್ಷದಲ್ಲಿ ಇದಕ್ಕೆ ಜಾಗ್ರತೆಯಾಗಿ ಹಣ ಕೊಟ್ಟು ಇದನ್ನು ದುರಸ್ತು ಮಾಡಿಸುತ್ತೀರಾ?

†ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಈ ಬಗ್ಗೆ ನನಗೆ ಇರತಕ್ಕ ಮಾಹಿತಿ ಪ್ರಕಾರ ಇದು ಸಾಧಾರಣವಾಗಿ ಜಿಲ್ಲಾ ರಸ್ತೆಗಳ ವರ್ಗಕ್ಕೆ ಬರುತ್ತದೆ ಮತ್ತು ಇದನ್ನು ಈಗಾಗಲೇ ಪಬ್ಲಿಕ್ ವರ್ಕ್ಸ್ ಡಿಪಾರ್ಟ್‌ಮೆಂಟಿನವರು ಮೇಂಟೇನ್ ಮಾಡುತ್ತಿದ್ದಾರೆ. ೧೯ ಕಿಲೋ ಮೀಟರುಗಿತ ಜಾಸ್ತಿ ಇದ್ದರೆ ಮತ್ತು ಮಾನ್ಯ ಸದಸ್ಯರು ಹೇಳಿದಹಾಗೆ ಇದು ಐರನ್ ಪೋರ್ ಪ್ರಾಜೆಕ್ಟಿಗೆ ಹೋಗುವ ರಸ್ತೆ ಆಗುವುದಾದರೆ ಇದನ್ನು ಖಂಡಿತ ಪರಿಶೀಲನೆ ಮಾಡುತ್ತೇವೆ.

ಶ್ರೀ ಜಿ. ಪುಟ್ಟಸ್ವಾಮಿ.—ಇದು ಕಂದುರೆವಂಖ ಐರನ್‌ವೋರ್ ಪ್ರಾಜೆಕ್ಟಿಗೆ ಹೋಗುವ ಉಪರಸ್ತೆಯಾಗಿರುವುದರಿಂದ ಇದನ್ನು ಜಾಗ್ರತೆಯಾಗಿ ಮಾಡಿಸುತ್ತೀರಾ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಖಂಡಿತವಾಗಿಯೂ ಮಾಡಿಸುತ್ತೇವೆ.

ಶ್ರೀ ಎಂ. ಎಚ್. ಜಯಪ್ರಕಾಶ್‌ನಾರಾಯಣ್.—ಸ್ವಾಮಿ, ಈ ಪ್ರಶ್ನೆಗೆ ಕೊಟ್ಟಿರತಕ್ಕ ಉತ್ತರದಲ್ಲಿ ಹಣಕಾಸು ಪರಿಸ್ಥಿತಿಯನ್ನು ಅವಲಂಬಿಸಿ ಇದನ್ನು ಪರಿಶೀಲಿಸಲಾಗುವುದು ಎಂದು ಹೇಳಿದ್ದೀರಿ. ಇನ್ನೊಂದು ಕಡೆ ಈ ರಸ್ತೆಯನ್ನು ಪಬ್ಲಿಕ್‌ವರ್ಕ್ಸ್ ಡಿಪಾರ್ಟ್‌ಮೆಂಟಿನವರು ಮೇಂಟೇನ್ ಮಾಡುತ್ತಿದ್ದಾರೆ ಎಂದು ಹೇಳಿದ್ದೀರಿ, ಆಮೇಲೆ ಇದು ಕುದುರೆಮುಖದ ಐರನ್ ಪೋರ್ ಪ್ರಾಜೆಕ್ಟಿಗೆ ಹೋಗತಕ್ಕ ರಸ್ತೆಯಾಗಿದ್ದರೆ ಇದನ್ನು ಪರಿಶೀಲನೆ ಮಾಡುತ್ತೇವೆ ಎಂದು ಹೇಳಿದ್ದೀರಿ, ಆದ್ದರಿಂದ ಇದಕ್ಕೆ ಸಂಬಂಧಪಟ್ಟ ಮಾಹಿತಿ ತಮ್ಮ ಹತ್ತಿರ ಇಲ್ಲದಿದ್ದರೆ ಅದನ್ನು ತರಿಸಿಕೊಂಡು ಈ ರಸ್ತೆಯ ಕೆಲಸವನ್ನು ತಕ್ಷಣ ಮಾಡಿಸಿಕೊಡುತ್ತೀರಾ?

ಶ್ರೀ ಎಂ ಮಲ್ಲಿಕಾರ್ಜುನಸ್ವಾಮಿ.—ಈ ರಸ್ತೆಯನ್ನು ಪಬ್ಲಿಕ್‌ವರ್ಕ್ಸ್ ಡಿಪಾರ್ಟ್‌ಮೆಂಟಿನವರು ಮೇಂಟೇನ್ ಮಾಡುತ್ತಿದ್ದಾರೆ ಎಂದು ವರದಿ ಬಂದಿದೆ. ಈ ರಸ್ತೆ ನಾದುರಸ್ತಿಗಿದೆ ಇದನ್ನು ದುರಸ್ತಿ ಮಾಡಿಸಿಕೊಡಬೇಕು ಎಂದು ಮಾನ್ಯ ಸದಸ್ಯರು ಪ್ರಶ್ನೆ ಕೇಳಿದ್ದಾರೆ. ಇದು ಪ್ರಾಜೆಕ್ಟ್ ರೋಡೂ ಹೌದೇ ಅಲ್ಲವೇ ಎಂಬುದನ್ನು ನೋಡಿ ಇದರಿಂದ ಪ್ರಾಜೆಕ್ಟಿಗೆ ಹೆಚ್ಚು ಸಹಾಯಕವಾಗುತ್ತದೆ ಎನ್ನುವುದಾದರೆ ಅದನ್ನು ಪರಿಶೀಲನೆ ಮಾಡುತ್ತೇವೆ ಎಂದು ಉತ್ತರ ಕೊಟ್ಟಿದ್ದೇನೆ. ಇದರಲ್ಲಿ ಯಾವ ವ್ಯತ್ಯಾಸವೂ ಇಲ್ಲ.

Power supply to IP sets in Khanapur

37. SRI N. B SIRDESAI (Khanapur).—Will the Minister of State for Information and Power be pleased to state.—

(*a*) the number of I.P.Sets working and energised in Khanapur Taluk;

(*b*) the number of I.P. Sets installed by raising loans from the Banks;

(*c*) the number of applications received for power supply in KEB office at Khanapur during 1974–75 and 1976–77;

(*d*) whether the Government intend to supply electrical material such as Aluminium Conductors. Wires and Transformers urgently and make available the power supply to the I.P. Sets in Khanapur Taluk within one month's time?

SRI B. SUBBAYA SHETTY (Minister of State for Information and Power).—

(*a*) 301 nos.

(*b*) 24 nos.

(*c*) during 1974—75 ... ... 13 nos.
during 1976—77 ... ... 89 nos.

(*d*) The available materials like, Aluminium conductors. etc. are being distributed equitably throughout the State, giving preference to drought affected areas. As such it is not feasible to supply the entire quantity of electrical materials required for energisation of all the pending I P Sets in Khanapur Taluk within one month's time.